# 8. ಸ.ಹಿ.ಪ್ರಾ.ಶಾಲೆ ಮಜ್ಜಾನ

ಮಲೆನಾಡಿನ ತಪ್ಪರಿನಲ್ಲಿರುವ ಶಿವಮೊಗ್ಗ ಜಿಲ್ಲೆಯ ಕೊಡಚಾದ್ರಿ ತಪ್ಪಲಿನಲ್ಲಿರುವ ಹೊಸನಗರ ತಾಲ್ಲೂಕಿನ ಅಮ್ಮನಘಟ್ಟದ ನೆರಳಿನಲ್ಲಿ ನಮ್ಮ ಸ.ಹಿ.ಪ್ರಾ.ಶಾಲೆ ಮಜ್ಜಾನವು ಕಂಗೊಳಿಸುತ್ತಿದೆ. ಸುಂದರ ಪ್ರಕೃತಿಯ ಮಡಿಲಿನಲ್ಲಿ ಈ ಶಾಲೆಯು ಅರಳಿ ನಿಂತು (1962–2018) 56 ವರ್ಷಗಳೇ ಸಂದಿವೆ.

ಪ್ರಾರಂಭಿಕ ವರ್ಷಗಳಲ್ಲಿ ಕಿರಿಯ ಪ್ರಾಥಮಿಕ ಶಾಲೆಯಾಗಿ ಆರಂಭಗೊಂಡು ಕೆಲವು ವರ್ಷಗಳ ನಂತರ ಹಿರಿಯ ಪ್ರಾಥಮಿಕ ಶಾಲೆಯಾಗಿ ರೂಪಾಂತರಗೊಂಡಿದೆ. ಪ್ರಾರಂಭದಿಂದ ಪ್ರಸ್ತುತ ವರ್ಷದವರೆಗೂ ಅನೇಕ ಶಿಕ್ಷಕರು ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ. ಅವರ ಸೇವೆ ಇಲ್ಲಿ ಸ್ಮರಣೀಯ ಹಾಗೆಯೇ ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದು ಸಮಾಜದಲ್ಲಿ ಉತ್ತಮ ಸ್ಥಾನದಲ್ಲಿದ್ದಾರೆ. ಅನೇಕರು ಸರ್ಕಾರಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ನಮ್ಮ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳು ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮಯ ಸಂಗತಿಯೇ ಆಗಿದೆ. ಪ್ರತಿಷ್ಠಿತ ಖಾಸಗಿ ಸಂಸ್ಥೆಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದು, ಇನ್ನೂ ಕೆಲವರು ರೈತಾಪಿಗಳು ಸ್ವಯಂ ಉದ್ಯೋಗಿಗಳು ಆಗಿದ್ದಾರೆ. ಇನ್ನೂ ಇತರರು ಹೈನುಗಾರಿಕೆ, ಮೀನುಗಾರಿಕೆಯಲ್ಲಿ ತೊಡಗಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ.

ಈ ಶಾಲೆಯ ಸುತ್ತ ಖಾಸಗಿ ಶಾಲೆಗಳಿದ್ದರೂ ಪಠ್ಯ–ಪಠ್ಯೇತರ ಚಟುವಟಿಕೆಯಲ್ಲಿ ಮಜ್ಜಾನ ಶಾಲೆ ಉತ್ತಮ ಸಾಧನೆಮಾಡುತ್ತಿದೆ. ಗುಣಮಟ್ಟದ ಶಿಕ್ಷಣ, ವಿಶಾಲವಾದ ಆಟದ ಮೈದಾನ, ಗ್ರಂಥಾಲಯ, ಸುಸಜ್ಜಿತವಾದ 4ಕೊಠಡಿಗಳು, ಸಮರ್ಪಕ ಸಿಬ್ಬಂದಿ ಹೀಗೆ ಈ ಶಾಲೆಯ ಉತ್ತಮ ಸೌಲಭ್ಯದ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಶಿಕ್ಷಕರಲ್ಲಿರುವ ಅನ್ಯೋನ್ಯತೆ ಸೇವಾನಿಷ್ಠತೆಯಿಂದ ಶಾಲಾ ವಿದ್ಯಾರ್ಥಿಗಳು ಪಠ್ಯ–ಪಠ್ಯೇತರ ಚಟುವಟಿಕೆಯಲ್ಲಿ ಉತ್ತಮ ಸಾಧನೆ ಮಡುತ್ತಿದ್ದಾರೆ. ಶಿಕ್ಷಕರ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಶಿಕ್ಷಕರ ಒಗ್ಗಟ್ಟಿನಿಂದ ಹೆಚ್ಚು ಕಾರ್ಯಕ್ರಮ ಏರ್ಪಡಿಸುವುದರಿಂದ ಇತರ ಶಾಲೆಗಳಿಗೆ ನಮ್ಮ ಶಾಲೆ ಮಾದರಿಯಾಗಿದೆ.

ರೇಡಿಯೋ ಕಾರ್ಯಕ್ರಮ, ನಲಿ–ಕಲಿ, 10ಅಂಶಗಳ ಕಾರ್ಯಕ್ರಮ, ಶಾಲೆಗೆ ಬನ್ನಿ ಶನಿವಾರ ಕಾರ್ಯಕ್ರಮ, ಮೀನಾ ಕಾರ್ಯಕ್ರಮಗಳನ್ನು ನಮ್ಮ ಶಾಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದೇವೆ. ನಮ್ಮ ಶಾಲೆಯಲ್ಲಿ ಮುಖ್ಯ ಶಿಕ್ಷಕರು ಸೇರಿದಂತೆ ನಾಲ್ಕು ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿಶೇಷವೆಂದರೆ ಮೂವರು ಶಿಕ್ಷಕರು ಪದವೀಧರ ಶಿಕ್ಷಕರಾಗಿದ್ದು, ಅದರಲ್ಲಿ ಇಬ್ಬರು ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ ಮತ್ತು ಇಬ್ಬರೂ ಶಿಕ್ಷಕರು ಬಿ.ಎಡ್ ಪದವಿಯನ್ನು ಪಡೆದಿರುತ್ತಾರೆ. ನಮ್ಮ ಶಾಲಾ ವಿದ್ಯಾರ್ಥಿಗಳು ಪ್ರತಿ ವರ್ಷ "ಕ್ರೀಡೆ ಹಾಗೂ ಪ್ರತಿಭಾರಾಂಜಿಯಲ್ಲಿ" ತಾಲ್ಲೂಕುಮಟ್ಟ ಹಾಗೂ ಜಿಲ್ಲಾಮಟ್ಟದಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ.

### ನಾವಿನ್ಯತೆ ಚಟುವಟಿಕೆಗಳು:–

1. ಗುಣಮಟ್ಟದ ಶಿಕ್ಷಣಕ್ಕಾಗಿ ಪಾಠೋಪಕರಣಗಳನ್ನು ಬಳಸುತ್ತಿದ್ದು, ಬೋಧನಾ ವಿಧಾನದಲ್ಲೂ ನಾವಿನ್ಯಯುತ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದೇವೆ. ಅಮೂರ್ತ ಕಲ್ಪನೆಗಳನ್ನು ಮೂಡಿಸಲೋಸ್ಕರ ದಾನವಾಗಿ ಬಂದಂತಹ ಕಂಪ್ಯೂಟರನ ಸದುಪಯೋಗ ಮಾಡಿಕೊಳ್ಳುತ್ತಿದ್ದೇವೆ. ಮಕ್ಕಳ ಮನೆ ಮನೆಗೆ ಭೇಟಿ ನೀಡಿ ಶಿಕ್ಷಣದ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸಲಾಗುತ್ತಿದೆ.
2. ಋತುಮಾನಕ್ಕನುಗುಣವಾಗಿ ತರಕಾರಿಯನ್ನು ಬೆಳೆದು ಬಿಸಿಯೂಟಕ್ಕೆ ಬಳಸಿಕೊಳ್ಳುತ್ತಿದ್ದೇವೆ. ಮರಗಿಡಗಳಿಗೆ ನೀರಿನ ವ್ಯವಸ್ಥೆಗಾಗಿ ಗ್ರಾಮ ಪಂಚಾಯತಿಯ ಸಹಕಾರದೊಂದಿಗೆ ನೀರೆತ್ತುವ ಮೋಟಾರ್ ವ್ಯವಸ್ಥೆ ಮಾಡಿಕೊಂಡು ನೀರಿನ ಮರುಬಳಕೆಗಾಗಿ ಹನಿ ನೀರಾವರಿ ಹಾಗೂ ತುಂತುರು ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತೇವೆ. ಅದರ ಮೂಲಕವೇ ಮಕ್ಕಳಿಗೆ ಕಲಿಕೆ ನಡೆಯುತ್ತಿದೆ.
3. ಶಾಲೆಯಲ್ಲಿ ನಡೆಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯನ್ನಾಗಿ ಮಾಡಲು ಅನುಕೂಲವಾಗುವಂತೆ ಶ್ರೀಯುತ ಮೋಹನ್ ಕಬ್ಬಳ್ಳಿ ಇವರು ಕೊಡುಗೆಯಾಗಿ ಕಿರು ಧ್ವನಿವರ್ಧಕವನ್ನು ನೀಡಿರುತ್ತಾರೆ. ಪ್ರತಿ ವಿದ್ಯಾರ್ಥಿಗೂ ಟೈ, ಬೆಲ್ಟ್ ಮತ್ತು ಐ.ಡಿ ಕಾರ್ಡಗಳನ್ನು ನೀಡಿರುತ್ತೇವೆ. ಶಾಲೆಗೆ ಅಗತ್ಯವಿರುವ ಸೂಕ್ಷದರ್ಶಕ ಯಂತ್ರವನ್ನು ನಮ್ಮ ಶಾಲೆಯ ಹಳೆಯ ವಿದ್ಯಾರ್ಥಿಯಾದ ಅಭಿಷೇಕ್ ಇವರು ಕೊಡುಗೆಯಾಗಿ

ನೀಡಿರುತ್ತಾರೆ. ಇದನ್ನು ವಿಜ್ಞಾನ ಬೋಧನೆಗೆ ಸಂಬಂಧಿಸಿದ ವಿಷಯಗಳ ಕಲಿಕೆಗೆ ಬಳಸುತ್ತಿದ್ದೇವೆ. ಮಕ್ಕಳಿಗೆ ಕ್ರೀಡೆಗೆ ಅನುಕೂಲವಾಗಲೆಂದು ವಾಲಿಬಾಲ್ ನೆಟ್ಟನ್ನು ಶ್ರೀ ಮಹೇಶ ಇವರು ನೀಡಿರುತ್ತಾರೆ. ಇದರ ಸದುಪಯೋಗವನ್ನು ನಮ್ಮ ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿದ್ದಾರೆ. ಕ್ಷೇತ್ರ ಭೇಟಿ, ಶೈಕ್ಷಣಿಕ ಪ್ರವಾಸಗಳ ಮೂಲಕ ಮಕ್ಕಳಿಗೆ ಮೂರ್ತ ಕಲ್ಪನೆಯನ್ನು ಮೂಡಿಸುತ್ತಿದ್ದೇವೆ.

4. ಶಾಲಾ ದಾಖಲಾತಿಯನ್ನು ಹೆಚ್ಚಿಸಲು ಅಕ್ಕ-ಪಕ್ಕದ ಹಳ್ಳಿಗಳ ಮನೆಗೆ ಭೇಟಿ ನೀಡಿ ಸರ್ಕಾರಿ ಶಾಲೆಯಲ್ಲಿ ಸಿಗುವ ಸೌಲಭ್ಯದ ಬಗ್ಗೆ ಮನದಟ್ಟು ಮಾಡಿಸಿ ಹೆಚ್ಚಿನ ಮಕ್ಕಳನ್ನು ನಮ್ಮ ಶಾಲೆಗೆ ಆಕರ್ಷಿಸುವ ಪ್ರಯತ್ನ ನಡೆಸುತ್ತಿದ್ದೇವೆ ."ಮನೆಗೊಂದುವಸ್ತು - ಶಾಲೆಗೊಂದುಸಂಪತ್ತು" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರತಿ ಪೋಷಕರು ಶಾಲೆಗೆ ಅಗತ್ಯವಿರುವ ವಸ್ತುಗಳನ್ನು ಕೊಡುಗೆಯಾಗಿ ನೀಡಿರುತ್ತಾರೆ.

## 5. ಸೌಲಭ್ಯಗಳು:-

ಪೋಷಕರ ಸಹಕಾರದಿಂದ ನಮ್ಮ ಶಾಲೆಯಲ್ಲಿ ಶುದ್ಧ ನೀರಿನ ಘಟಕವನ್ನು (Livepure) ಸ್ಥಾಪಿಸಿ ಪ್ರತಿ ತರಗತಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ(2016-17) ಶ್ರೀಯುತ ವೀರಭದ್ರಪ್ಪನವರು ನಮ್ಮ ಶಾಲೆಗೆ 2014-15ನೇ ಇಸವಿಯಲ್ಲಿ ಕಂಪ್ಯೂಟರ್‌ನ್ನು ಕೊಡುಗೆಯಾಗಿ ನೀಡಿರುತ್ತಾರೆ. ಅದಕ್ಕೆ ಪೂರಕವಾಗಿ ನಮ್ಮ ಶಾಲೆಯ ವತಿಯಿಂದ ಮುದ್ರಣ ಯಂತ್ರವನ್ನು ಖರೀದಿಸಿರುತ್ತೇವೆ. ಈ ಸೌಲಭ್ಯಗಳಿಂದ ನಾವು ಇಲಾಖೆಯ ಎಲ್ಲಾ ಮಾಹಿತಿಗಳನ್ನು ಮುದ್ರಿತ ರೂಪದಲ್ಲಿ ನೀಡುತ್ತಿರುತ್ತೇವೆ ಹಾಗೆಯೇ ಪರೀಕ್ಷಾ ಪತ್ರಿಕೆಗಳು, ಪ್ರವೇಶ ಪತ್ರ, ಮತಪತ್ರಗಳನ್ನು ಕೂಡ ಮುದ್ರಿತ ರೂಪದಲ್ಲಿ ನೀಡುತ್ತಿದ್ದೇವೆ.

ನಮ್ಮ ಶಾಲೆಯಲ್ಲಿ ಸುಂದರವಾದ ಕೈತೋಟವಿದ್ದು ವಿವಿಧ ಬಗೆಯ ಹೂವಿನ ಗಿಡಗಳು, ಔಷಧೀಯ ಸಸ್ಯಗಳು, ಕದಳಿವನ, ಅಡಕೆ ಸಸಿಗಳು, ಅಶೋಕ ವೃಕ್ಷಗಳಿಂದ ನಮ್ಮ ಶಾಲೆಯ ಅಂದ ಹೆಚ್ಚುತ್ತಿವೆ. ಮಕ್ಕಳನ್ನು ಶಾಲೆಯತ್ತ ಆಕರ್ಷಿಸಲುವಾಗಿ ಪೋಷಕರ ಸಹಾಯದಿಂದ ಜೋಕಾಲಿ ಹಾಗೂ ತೂಗುಸೇತುವೆ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತೇವೆ. ಮಕ್ಕಳಿಗೆ ದಿಕ್ಕುಗಳ ಪರಿಕಲ್ಪನೆ ಮೂಡಿಸಲು ಶಾಲಾ ಮಕ್ಕಳೇ ದಿಕ್ಸೂಚಿ ಕಂಬವನ್ನು ನಿರ್ಮಿಸಿರುತ್ತಾರೆ. ದುಶ್ಚಟಗಳಿಂದಾಗುವ ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು "ತಂಬಾಕು ಭೂತ" ನಿರ್ಮಿಸಿ ಅದರಲ್ಲಿ ಮದ್ಯಪಾನ, ಧೂಮಪಾನ, ಮತ್ತು ಗುಟ್ಕಾ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಘೋಷಣಾ ವಾಕ್ಯಗಳನ್ನು ಪ್ರದರ್ಶಿಸಿರುತ್ತೇವೆ.

ಶ್ರೀಯುತ ವೀರಭದ್ರಪ್ಪನವರು ಕೊಡುಗೆಯಾಗಿ ನೀಡಿದ ಸರಸ್ವತಿ ವಿಗ್ರಹದ ಮಂಟಪವನ್ನು ನೈಸರ್ಗಿಕವಾಗಿ ಮರಳುಗಲ್ಲುಗಳಿಂದ ನಿರ್ಮಿತವಾಗಿದ್ದು ಅದರ ಹಿಂದೆ ಎರಡು ಕೊಳನಿರ್ಮಿಸಿ ಕಾರಂಜಿಗಳನ್ನು ಅಳವಡಿಸಲಾಗಿದೆ. ಈ ಒಂದು ಮಂಟಪದ ನಿರ್ಮಾಣಕ್ಕೆ ಹಲವು ಪೋಷಕರು ಧನ ಸಹಾಯ ಮಾಡಿರುತ್ತಾರೆ. ನಮ್ಮ ಶಾಲಾ ಮಕ್ಕಳಿಗಾಗಿ ಶ್ರೀಯುತ ವೀರಭದ್ರಪ್ಪನವರು ಕಲಿಕೆಗೆ ಸಹಕಾರಿಯಾಗುವಂತೆ 3,500/- ಮೊತ್ತದ ಪುಸ್ತಕಗಳನ್ನು ದಾನವಾಗಿ ನೀಡಿರುತ್ತಾರೆ. ಹಾಗೆಯೇ 'ಅರುಡೋ ಸಂಸ್ಥೆ'ಯವರು ಶಾಲಾ ಮಕ್ಕಳಿಗಾಗಿ 290 ನೋಟ್ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿರುತ್ತಾರೆ.

ಮಕ್ಕಳಿಗೆ ಎಸ್.ಯು.ಪಿ.ಡಬ್ಲ್ಯೂ ಚಟುವಟಿಕೆಗಳನ್ನು ಮಾಡಿಸಲು ಕಸದಿಂದ ರಸ, ಓರೆಗಾಮಿ ಚಟುವಟಿಕೆಗಳನ್ನು ಕೈಗೊಂಡ, ಪ್ರಾಣಿಪಕ್ಷಿಗಳ ವಿವಿಧ ಮಾದರಿಯನ್ನು ತಯಾರಿಸಲು ಪ್ರೋತ್ಸಾಹಿಸುತ್ತಿದ್ದೇವೆ. ಶಾಲಾ ಪೋಷಕ ವರ್ಗದವರಿಗೆ ತಮ್ಮ ಕೈಲಾದ ಸೇವೆಯನ್ನು ನೀಡಲು ಪ್ರೋತ್ಸಾಹಿಸುತ್ತೇವೆ.

ಆರಂಭದಲ್ಲಿ ನಾವು ಎದುರಿಸಿದ ಸಮಸ್ಯೆ ಸವಾಲುಗಳು:-

"ಮಳೆ ಬಂದಾಗ ಎಲ್ಲ ಹಕ್ಕಿಗಳು ಮರದ ಆಶ್ರಯ ಪಡೆಯುತ್ತವೆ. ಆದರೆ ಹದ್ದುಗಳು ಮೋಡದಿಂದಲೂ ಮೇಲಕ್ಕೆ ಹೋಗಿ ಹಾರಾಡುತ್ತವೆ. ಸಮಸ್ಯೆ ಎಲ್ಲರಿಗೂ ಇದೆ. ಆದರೆ ಅದನ್ನು ಹೇಗೆ ಎದುರಿಸುತ್ತೀರಿ ಎನ್ನುವುದು ಮುಖ್ಯ".

ನಮ್ಮ ಶಾಲೆಯಲ್ಲಿಯೂ ಸಹ ಪ್ರಗತಿ ಹೆಜ್ಜೆಯನ್ನು ಇಡುವಲ್ಲಿ ನಾವು ಸಹ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೆವು. ಮೊದಲಿನಿಂದಲೂ ಇಲ್ಲಿನ ಪೋಷಕರಿಗೆ ಶಾಲೆಯ ಬಗ್ಗೆ ತೀವ್ರ ನಿರ್ಲಕ್ಷ್ಯ ಇರುವುದು ಕಂಡುಬರುತ್ತದೆ. ಇಲ್ಲಿನ ಪೋಷಕರಿಗೆ ಶಿಕ್ಷಣದ ಬಗೆಗಿನ ಆಸಕ್ತಿಯೂ ಕಡಿಮೆ ಎನ್ನಬಹುದು. ಆರ್ಥಿಕವಾಗಿಯೂ ಸಹ ಇಲ್ಲಿನ ಜನರ ಸಾಧಾರಣ ಸ್ಥಿತಿಯಲ್ಲಿದ್ದಾರೆ. ಮೊದಮೊದಲಿಗಂತೂ ಶಾಲೆಯಲ್ಲಿ

ನಡೆಯುವ ಯಾವುದೇ ರೀತಿಯ ಪ್ರಗತಿ ಕಾರ್ಯಗಳಿಗೆ ಬೆಂಬಲ ನೀಡುತ್ತಿರಲಿಲ್ಲ. ಈಗಲೂ ಸಹ ಬಹಳಷ್ಟು ಜನರ ಮನೋಭಾವ ನಿರ್ಲಕ್ಷ್ಯತನದಿಂದ ಕೂಡಿದೆ ಎನ್ನಬಹುದು. ಕೈತೋಟ ನಿರ್ಮಾಣದಲ್ಲಿ, ತಂತಿ ಬೇಲಿ ನಿರ್ಮಾಣದಲ್ಲಿ ಹಾಗೂ ಸರಸ್ವತಿ ವಿಗ್ರಹ ಸ್ಥಾಪನೆ ವಿಷಯದಲ್ಲಿ ಸಮುದಾಯ ಅಸಹಕಾರ ತೋರಿತ್ತು. ನಿಸ್ವಾರ್ಥ ಸೇವಾ ಮನೋಭಾವ ಸ್ಥಳೀಯರಲ್ಲಿ ಕೊಂಚ ಕಡಿಮೆಯೇ, ಅಲ್ಲದೇ ಇಲ್ಲಿನ ಮಣ್ಣಿನಲ್ಲಿ ಪೋಷಕಾಂಶದ ಕೊರತೆಯೂ ಇದೆ. ಒಟ್ಟಾರೆಯಾಗಿ ಎಲ್ಲ ಕಡೆಗಳಿಂದಲೂ ನಮಗೆ ಅನುಕೂಲತೆಗಳಿಗಿಂತ ಅನಾನುಕೂಲಗಳೇ ಹೆಚ್ಚು ಎನ್ನಬಹುದು.

## ಪರಿಹಾರಕ್ಕೆ ನಾವು ತೆಗೆದುಕೊಂಡ ಕ್ರಮಗಳು:–

ಮನಸ್ಸಿದ್ದರೆ ಮಾರ್ಗ ಎಂಬ ಮಾತಿನಂತೆ ಛಲ ಬಿಡದ ಭಗೀರಥ ಪ್ರಯತ್ನವನ್ನು ಸತತ 14ವರ್ಷಗಳಿಗಂದ ಮಾಡುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ಫಲವನ್ನು ಕಾಣುತ್ತಿದ್ದೇವೆ. ಇತ್ತೀಚಿನ ದಿನಗಳಲ್ಲಿ ಪೋಷಕರ ಮನೋಭಾವ ಬದಲಾಗಿದ್ದು, ಶಾಲೆಯ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ. ಗುಣಮಟ್ಟದ ಶಿಕ್ಷಣದತ್ತ ತುಂಬು ಸಹಕಾರ ನೀಡುತ್ತಿದ್ದಾರೆ. ಶಿಕ್ಷಕರ ಬೋಧನೆಯ ಬಗ್ಗೆ ಸಕಾರಾತ್ಮಕ ಧೋರಣೆಯನ್ನು ಹೊಂದುತ್ತಿದ್ದಾರೆ. ಶಾಲೆಯ ಭೌತಿಕ ಅಗತ್ಯಗಳನ್ನು ತಿಳಿದು ತನು–ಮನ–ಧನದಿಂದ ಸಹಕಾರವನ್ನು ನೀಡುವಂತೆ ಪೋಷಕರನ್ನು ಹುರಿದುಂಬಿಸುತ್ತಿದ್ದೇವೆ.

ಅಕ್ಕ–ಪಕ್ಕದ ಹಳ್ಳಿಯವರು ಖಾಸಗಿ ಶಾಲೆಯ ಕಡೆ ಒಲವನ್ನು ತೋರದಂತೆ ತಮ್ಮ ಮಕ್ಕಳನ್ನು ನಮ್ಮ ಶಾಲೆಗೆ ಸೇರಿಸುವಂತೆ ಮಾಡಲು ಮನೆ ಮನೆಗೆ ಭೇಟಿ ನೀಡಿ, ನಮ್ಮ ಶಾಲೆಗೆ ಮಕ್ಕಳನ್ನು ಸೇರಿಸುವಂತೆ ಪ್ರೋತ್ಸಾಹಿಸುತ್ತಿದ್ದೇವೆ. ಶಾಲಾ ಸಮುದಾಯದಲ್ಲಿರುವ ಉತ್ತಮ ಸ್ಥಿತಿವಂತರು ಅದರಲ್ಲೂ ದಾನ ಕೊಡುವ ಮನೋಭಾವ ಉಳ್ಳವರ ಮನೆಗೆ ಭೇಟಿ ನೀಡಿ ಶಾಲೆಗೆ ಅಗತ್ಯವಿರುವ ವಸ್ತುಗಳನ್ನು ಕೊಡುಗೆಯ ಪಡೆಯುತ್ತಿದ್ದೇವೆ. ಶಾಲಾ ಪರಿಸರವನ್ನು ಸುಂದರಗೊಳಿಸಿಕೊಳ್ಳಲು ಸುಂದರ ಕೈತೋಟದ ನಿರ್ಮಾಣವನ್ನು ಮಾಡಿದ್ದೇವೆ. ಆಕರ್ಷಕ ತೂಗು ಸೇತುವೆ, ಜೋಕಾಲಿ ನಿರ್ಮಾಣ ಮಾಡಿದ್ದೇವೆ. ದಿಕ್ಸೂಚಿ ಹಾಗೂ ತಂಬಾಕು ಭೂತಗಳನ್ನು ನಿರ್ಮಿಸಿದ್ದೇವೆ.ವ ಇತ್ತೀಚಿನ ದಿನಗಳಲ್ಲಿ ನಮ್ಮ ಶಾಲೆಗೆ ಯಥೇಚ್ಛವಾಗಿ ದಾನ ಹರಿದು ಬರುತ್ತಿದೆ. ಇದು ನಮ್ಮ ಪ್ರಯತ್ನಕ್ಕೆ ಸಂದ ಪ್ರತಿಫಲವೇ ಸರಿ.


ಶಾಲೆಗಾಗಿ ತನು ಮನ ಧನ ನೀಡಿದ ಮಹನೀಯರೆಂದರೆ ಶ್ರೀಯುತರುಗಳಾದ ವೀರಭದ್ರಪ್ಪ ಕಬ್ಬಳ್ಳಿ, ಕೃಷ್ಣಪ್ಪ ಕುನಗೋಡು, ಸೋಮಶೇಖರ್(ಎಸ್‌ಡಿಎಂಸಿ), ಸೋಮಶೇಖರ್, ಶಿವಪ್ಪ ಮುತ್ತಲ, ಮೋಹನ ಕಬ್ಬಳಿ, ಚೆನ್ನಪ್ಪ ಕೆಸರೆ, ಮಹೇಶ್ ಕುನಗೋಡು, ಡಾಕಪ್ಪ ಛತ್ತಳಿ, ಗಜಾನನ ಭದ್ರೋಡಿ, ಸಮುದಾಯ ಹಾಗೂ ಶಾಲೆಗಳ ನಡುವ ಅವಿನಾಭಾವ ಸಂಬಂಧ ಇದ್ದಾಗ ಮಾತ್ರ ಒಂದು ಶಾಲೆ ಉತ್ತುಂಗ ಶಿಖರಕ್ಕೆ ಏರಲು ಸಾಧ್ಯ ಜನರಿಗೆ ಹಣದ ಶ್ರೀಮಂತಿಕೆಗಿಂತ ಹೃದಯ ಶ್ರೀಮಂತಿಕೆ ಇದ್ದರೆ ಮಾತ ಅವರು ಶ್ರೇಷ್ಠರೆನಿಸಿಕೊಳ್ಳುತ್ತಾರೆ. ಅಂತಹ ಶ್ರೇಷ್ಠದಾನಿಗಳಿಗೆ ನಾವೆಂದೂ ಅಭಾರಿಗಳಾಗಿದ್ದೇವೆ.


"ಸಾಧಿಸುವ ಛಲ ಇದ್ದರೆ ಮಾತ್ರ ಸಾಧನೆ" ಅವಕಾಶ ಮತ್ತು ಅನುಕೂಲಗಳಿಗೆ ಕಾಯುತ್ತಾ ಕೂರವ ಬದಲು ಇವರು ಸಂಗತಿಗಳೊಡನೆಯೇ ನಮ್ಮಿಂದ ಸಾಧ್ಯವಿರುವ ಶಕ್ತಿ ವಿನಿಯೋಗಿಸಿ ಕಾರ್ಯತತ್ಪರರಾಗೋಣ ಎಂಬ ನಿಲುವಿನೊಂದಿಗೆ ನಮ್ಮ ಕಾರ್ಯ ಸಾಗುತ್ತಲೇ ಇರುತ್ತದೆ. ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ಹಂಬಲವಿದೆ. ಅದಕ್ಕೆ ಸಮುದಾಯದ ಬೆಂಬಲದ ನಿರೀಕ್ಷೆಯಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರಗತಿಯನ್ನು ಕಾಣುವ ಹಂಬಲದೊಂದಿಗೆ ಈ ಯಶೋಗಾಥೆಗೆ ಪೂರ್ಣ ವಿರಾಮ ನೀಡುತ್ತಿದ್ದೇವೆ.










14.11.2017

